ಶ್ರೀ ಹರಿವಾಯು ಗುರುಭ್ಯೋ ನಮಃ

# ಕಪ್ಪುಧರೆಯಿಂದ ಧವಳಗಿರಿಯೆಡೆಗೆ

**ನಿಡಗುಂದಿ ರಘುನಂದನ ಶರ್ಮ**
**ಸಾರ್ವಜನಿಕ ಸಂಪರ್ಕಾಧಿಕಾರಿ – (II)**
**ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ**

## ನಗಾಧಿರಾಜ ಹಿಮಾಲಯ!

ಪ್ರಪಂಚದ ಬಹುತೇಕ ಎಲ್ಲ ದೇಶಗಳಲ್ಲಿಯೂ ಒಂದಲ್ಲ ಒಂದು ಹಿಮಭರಿತವಾದ ಪರ್ವತವಿರುವುದೇನೋ ವಾಸ್ತವ. ಆದರೆ ಭರತವರ್ಷದ (ಕೇವಲ ಆಧುನಿಕ ಭಾರತವಲ್ಲ) ಹಿಮಾಲಯಕ್ಕೆ ಇರುವ ಮಾಂತ್ರಿಕವಾದ ಚುಂಬಕಶಕ್ತಿ ಬೇರಾವ ಪರ್ವತಗಳಿಗೂ ಇಲ್ಲವೆನ್ನುವುದು ಹಿಮಾಲಯ ಪರ್ವತಗಳಿಗೆ ಭೇಟಿಕೊಡುವವರಿಗೆ ಅನುಭವಕ್ಕೆ ಬರುವ ವಿಷಯ. ನಿಸರ್ಗಪ್ರಿಯರಿಗೆ ಇಲ್ಲಿ ಕೇವಲ ನಿಸರ್ಗವೇ ಉಪಾಸನೆಯ ಮಾಧ್ಯಮವಾದರೆ ದೈವಭೀರುಗಳಿಗೆ ಹಿಮಾಲಯದ ಪ್ರತಿಯೊಂದು ಪರ್ವತವೂ ದೇವರ ಪ್ರತಿರೂಪ. ಅಷ್ಟೇ ಅಲ್ಲ ಪರ್ವತಾವಳಿಯ ಹಲವಾರು ಮಜಲುಗಳಲ್ಲಿ ನೂರಾರು ಅವಾಂತರ ದೈವಗಳಿಗೆ ಠಾಣವನ್ನೂ ಕಲ್ಪಿಸಿ ಅದೇ ಕಾರಣದಿಂದ ಹಿಮವತ್ಪರ್ವತಗಳಿಗೆ ಭೇಟಿನೀಡಿ ಮೈನಡುಗುವ ಚಳಿಯಲ್ಲಿ ಪುಳಕಗೊಳ್ಳುವ ತವಕ!

ಪಾಕಿಸ್ತಾನದಲ್ಲಿರುವ ಹಿಂಗ್ಲಜಾದೇವಿಯ ಮಂದಿರದಿಂದ ಡಾರ್ಜಿಲಿಂಗಿನ ದುರ್ಜಯಲಿಂಗೇಶ್ವರ ದೇವಸ್ಥಾನದವರೆಗೂ ವಿಭಿನ್ನ ವಲಯಗಳಲ್ಲಿ ನಮ್ಮ ಹಿಮಾಲಯದ ತೀರ್ಥಯಾತ್ರಾ ಸ್ಥಳಗಳು ಹರಡಿಕೊಂಡಿವೆ. ಇವುಗಳ ಪೈಕಿ ಮಹಾವಿಷ್ಣುವಿನ ಕ್ಷೇತ್ರವೆನಿಸಿರುವ ಬದರೀನಾಥವು ಬೇರೆಲ್ಲ ಯಾತ್ರಾಸ್ಥಳಗಳಿಗಿಂತ ಸುಲಭವಾಗಿ (ಇದ್ದಿದ್ದರಲ್ಲೇ!) ತಲುಪಲು ಸಾಧ್ಯವಿರುವ ಸ್ಥಳ. ಉತ್ತರಾಖಂಡ ರಾಜ್ಯದ ಚಮೋಲಿ ಜಿಲ್ಲೆಯಲ್ಲಿ ಬದರೀನಾಥವು ಒಂದು ಚಿಕ್ಕ (ಪುಟಾಣಿ ಎಂದರೆ ಸರಿ ಹೋದೀತು) ಗ್ರಾಮ. ಭೋರ್ಗರೆಯುತ್ತ ಹಿಮಖಂಡಗಳಿಂದ ಹರಿದು ಬರುವ ಅಲಕನಂದೆಯು ಈ ಗ್ರಾಮವನ್ನು ಎರಡು ಭಾಗಗಳಾಗಿ ವಿಂಗಡಿಸಿದೆ. ಉತ್ತರದ ತಟದಲ್ಲಿ ನಾರಾಯಣಪರ್ವತವಿದೆ. ಇಲ್ಲಿಯೇ ಜಗದ್ವಿಖ್ಯಾತವಾದ ಬದರೀನಾರಾಯಣನ ಸನ್ನಿಧಿ ಇರುವುದು. ದಕ್ಷಿಣದ ದಂಡೆಯು ನರ ಪರ್ವತವಿದ್ದು ಇಲ್ಲಿ ಆಧುನಿಕಕಾಲದ ಕಟ್ಟಡಗಳು ನಿರ್ಮಿತವಾಗಿ ಯಾತ್ರಿಕರಿಗೆ ಅನುಕೂಲಗಳನ್ನು ಒದಗಿಸುತ್ತ ನಿಂತಿವೆ. ಬದರೀನಾಥದ ಬಗ್ಗೆ ಬೇರೆಲ್ಲ ಕಡೆ ಸಾಕಷ್ಟು ವಿವರಗಳು ಲಭ್ಯವಿದೆಯಾದ್ದರಿಂದ ಅದನ್ನೇ ಪುನಃ ವಿವರಿಸುವುದು ಇಲ್ಲಿನ ಉದ್ದೇಶವಾಗಿಲ್ಲ. ಆದರೆ ಇಲ್ಲಿನ ಒಂದು ಪ್ರಾಚೀನ ನಂಬಿಕೆಯನ್ನು ಮತ್ತು ಇಲ್ಲಿನ ಹವಾಮಾನದ ಒಂದಿಷ್ಟು ಲಕ್ಷಣಗಳನ್ನು ಪ್ರಸ್ತಾವಿಸುವುದು ಲೇಖನದ ಮೂಲ ಉದ್ದೇಶಕ್ಕೆ ಪೂರಕ. ನೀವು ರಾಯರಭಕ್ತರಾಗಿದ್ದಲ್ಲಿ ನಿಮಗೆ ಈ ಲೇಖನ ಸಂತಸ ನೀಡುವುದು ಖಚಿತ.

## ಸಾಧಕರ ನೆಲೆವೀಡು ನಾರಾಯಣಪರ್ವತ

ಸಾಕ್ಷಾತ್ ಶ್ರೀ ನಾರಾಯಣನೇ ಪರ್ವತದ ರೂಪಧಾರಣೆಮಾಡಿ ಇಲ್ಲಿ ನಾರಾಯಣಪರ್ವತವಾಗಿ ಅಚಲವಾಗಿದ್ದಾನೆ ಎಂದು ಪುರಾಣಗಳು ಹೇಳುತ್ತವೆ. ಈ ಪರ್ವತದ ಮೇಲೆ ಮಾಡುವ ಜಪಗಳಿಗೆ ಒಂದಕ್ಕೆ ಸಹಸ್ರಪಟ್ಟು ಫಲದಾಯಕ ಎನ್ನುವುದು ಇನ್ನೊಂದು ವಿಶೇಷ. (ಉದಾ:– ಒಂದು ಬಾರಿ "ಓಂ ನಮೋ ನಾರಾಯಣಾಯ" ಎಂದರೆ ಒಂದು ಸಾವಿರ ಬಾರಿ ಹೇಳುವುದಕ್ಕೆ ಸಮಾನ) ಹೀಗಾಗಿ ನಾರಾಯಣ ಪರ್ವತದ ಮೇಲೆ ಜಪನಿರತರಾದ ನೂರಾರು ಮಂದಿ ಸಾಧುಗಳನ್ನು ನಾವು ಕಾಣಬಹುದು.



**ನಾರಾಯಣಪರ್ವತದ ಹಿನ್ನೆಲೆಯೊಂದಿಗೆ ಶ್ರೀಬದರೀನಾಥನ ದೇಗುಲ**

ಹವಾಗುಣದ ಬಗ್ಗೆ ಹೇಳುವುದಾದರೆ ಬದರಿಕಾಶ್ರಮದಲ್ಲಿ ಆಮ್ಲಜನಕದ ಕೊರತೆ ಸಹಜ. ಮೆಟ್ಟಿಲುಗಳನ್ನು ಹತ್ತಿಳಿಯುವುದು ಇರಲಿ ಚಳಿಯಾಗುತ್ತದೆಂದು ಕಂಬಳಿಯನ್ನು ಕೊಡವಿ ಹೊದ್ದರೂ ಸಾಕು ಉಸಿರಾಟ ಮೇಲೆ ಕೆಳಗೆ ಆಗುವುದು. ಆದರೆ ಒಂದು ದಿನ ಈ ಊರಿನಲ್ಲಿದ್ದರೆ ಸ್ವಲ್ಪ ಹೊಂದಿಕೆಯಾಗಬಹುದು. ಸಾಮಾನ್ಯವಾಗಿ ಮಧ್ಯಾನ ಮೈಗೆ ಚುರುಕು ಮುಟ್ಟಿಸುವ ಬಿಸಿಲು ಇದ್ದರೂ ಇದರ ಆಯುಷ್ಯ ಇಂತಿಷ್ಟೇ ಎಂದು ಹೇಳಲಾಗದು. ಮಧ್ಯಾಹ್ನ 3ಗಂಟೆಗೆ 25ಡಿಗ್ರಿ ಇರುವ ತಾಪಮಾನ 3.10 ಮೈನಸ್ 3ಕ್ಕೆ ಇಳಿದರೂ ಆಶ್ಚರ್ಯವಿಲ್ಲ. ಮೇಲಾಗಿ ಮೇಲ್ಭಾಗದ ಹಿಮಪರ್ವತದಿಂದ ವೇಗವಾಗಿ ಬೀಸುವ ಶೀತಗಾಳಿ ದಕ್ಷಿಣದಿಂದ ಹೋಗುವವರನ್ನು ಸಾಕಷ್ಟು ಹೆದರಿಸುತ್ತದೆ. ಹೀಗಿದ್ದರೂ ಹಲವಾರು ತಿಂಗಳುಗಳು ಇಲ್ಲಿದ್ದು ತಮ್ಮ ಜಪದ ಸಾಧನೆ ಮಾಡಿಹೋದವರನ್ನು ನಾನು ನೋಡಿದ್ದೇನೆ. ಅಂತೆಯೇ ತಿಂಗಳ ಮಟ್ಟಿಗೆ ಸಾಧನೆ(?) ಮಾಡುತ್ತೇವೆ ಎಂದು ಬಂದು ಚಳಿಗಾಳಿಗೆ ಬೆದರಿ ಕೇವಲ ನಾಲ್ಕೇ ದಿನಕ್ಕೆ ಗಂಟುಮೂಟೆ ಕಟ್ಟಿದವರು ಸಹ ಸಾಕಷ್ಟು ಮಂದಿ ಇದ್ದಾರೆ.

ಬದರೀನಾಥನ ಅರ್ಚಕರೇನೋ ಪಾರಂಪರಿಕವಾಗಿ ದಕ್ಷಿಣಭಾರತದವರೇ ಆದರೂ ನಾರಾಯಣ ಪರ್ವತದಲ್ಲಿ ದಕ್ಷಿಣಭಾರತದ ಧರ್ಮಸಂಸ್ಥೆಗಳಿಗೆ ಅಷ್ಟಾಗಿ ಪ್ರಾತಿನಿಧ್ಯ ಕಂಡುಬಂದಿಲ್ಲ. ಪ್ರಾಯಶಃ ಇದು ಪ್ರಾಂತೀಯ ವೈಶಿಷ್ಟ್ಯವಾಗಿರಲಿಕ್ಕೂ ಸಾಕು. ಮೇಲಾಗಿ ಶತಮಾನಗಳಿಂದಲೂ ಇಲ್ಲಿನ ನಿವಾಸಿಗಳೇ ಇಲ್ಲಿ ಧರ್ಮಚತ್ರಗಳನ್ನೂ, ಮನೆಗಳನ್ನೂ ಕಟ್ಟಿಕೊಂಡಿದ್ದಾರೆ. ಹೀಗಾಗಿಯೂ ನಮಗೆ ಅಲ್ಲಿ ಪ್ರವೇಶ ಹೆಚ್ಚೂ ಕಮ್ಮಿ ಅಸಾಧ್ಯವೇ ಎನ್ನಬಹುದು. ಇಲ್ಲಿನ ಮುಖ ಚಹರೆಗಳೂ ಸಹ ನೇಪಾಳದವರನ್ನೇ ಹೋಲುತ್ತವೆ. ಮಾತು ಗಢವಾಲೀ. (ಹಿಂದಿಯಲ್ಲ!) ಈ ಎಲ್ಲ ಕಾರಣಗಳಿಂದ ಈ ಪರ್ವತದಲ್ಲಿ ನಮ್ಮ ದಕ್ಷಿಣದವರ ಒಂದೇ ಒಂದು ಮುಖ ಕಂಡರೂ ಅವರು ಪರಿಚಯವಿದ್ದಾರೋ ಇಲ್ಲವೋ, ಆದರೂ ನಮಗೇ ಗೊತ್ತಿಲ್ಲದಂತೆ ಸಂತಸವಾಗುತ್ತದೆ. ಅಪರಿಚಿತರಾದವರನ್ನು ನೋಡಿದರೇ ಸಂತೋಷವಾಗುವುದಾರೆ ತೀರಾ ನಮ್ಮವರೇ ಆದ ಒಬ್ಬರು ನಮಗೆ ಅನಿರೀಕ್ಷಿತವಾಗಿ ಕಂಡುಬಿಟ್ಟರೆ! ಮುಖ ಊರಗಲವಾಗದೆ?! ಇನ್ನೊಂದಿಷ್ಟು ಮುಂದೆ ಹೋದಾಗ ನಮಗೆ ಊಹಿಸಲೂ ಸಮಯವೀಯದೆ ಅಲ್ಲಿ ರಾಯರ ವೃಂದಾವನವೊಂದರ ದರ್ಶನವಾದರೆ? ಅದೊಂದು ಮಹದಾನಂದವಲ್ಲವೇ! ಯಾಕೆಂದರೆ ರಾಯರ ಭಕ್ತರು ರಾಯರನ್ನೇ ಅಪ್ಪ, ಅಮ್ಮ, ಅಣ್ಣ, ಗುರು, ಸ್ನೇಹಿತ ಎಂದೆಲ್ಲ ಭಾವಿಸಿ ಆರಾಧಿಸುವವರು. ಇಂತಹವರಿಗೆ ರಾಯರಂತಹ ಆತ್ಮೀಯರು ನಾರಾಯಣಪರ್ವತದಂತಹ ದಿವ್ಯಕ್ಷೇತ್ರದಲ್ಲಿ ದರ್ಶನವಿತ್ತರೆ ಅದೊಂದು ದಿವ್ಯಾನುಭವವೇ ಸರಿ. ಇದು ಕೇವಲ ಕಲ್ಪನೆಯಲ್ಲ. ನೂರಕ್ಕೆ ನೂರು ವಾಸ್ತವ ಸಂಗತಿ.

ನೀವು ಶ್ರೀಬದರೀನಾರಾಯಣನ ದರ್ಶನವನ್ನು ಮುಗಿಸಿಕೊಂಡು ಬರುತ್ತಿರುವಾಗ ಕೊನೆಯಮೆಟ್ಟಿಲು ಇಳಿದಾದ ನಂತರ ಎಡಕ್ಕೆ ಹೊರಳಿ ನೇಪಾಳೀ ಆಶ್ರಮವನ್ನು ದಾಟಿದರೆ ನಂತರ ಬರುವುದೇ ಶ್ರೀರಾಘವೇಂದ್ರಗುರುಸಾರ್ವಭೌಮರ ಚರವೃಂದಾವನ ಸನ್ನಿಧಾನ. ಪ್ರಧಾನ ದೇವಳಕ್ಕೆ ಕೇವಲ ನಾಲ್ಕೈದು ಹೆಜ್ಜೆಗಳ ಅಂತರ. ಇಲ್ಲಿ ಶ್ರೀರಾಯರ ನಿತ್ಯ ಪೂಜೆಯೂ ನಡೆಯುವುದು. ಬಂದಂತಹ ಯಾತ್ರಿಕರಿಗೆ ಮೊದಲೇ ಹೇಳಿಟ್ಟರೆ ಸವಿಯಾದ ಭೋಜನಪ್ರಸಾದವೂ ಲಭ್ಯ.

## ಹಿಮದನಾಡಿನಿಂದ ಬಯಲುನಾಡಿಗೆ

ಶ್ರೀರಾಘವೇಂದ್ರಪ್ರಭುಗಳು ಮಹಾಸಮರ್ಥರೆನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಉತ್ತರದವರ ಪ್ರಾಬಲ್ಯವಿರುವ ಈ ನಾರಾಯಣಪರ್ವತದಲ್ಲಿ ಶ್ರೀಗುರುರಾಜರ ವೃಂದಾವನವು ಬಂದು ನೆಲೆಸಿರುವುದರ ಹಿನ್ನೆಲೆ ತಿಳಿಯಲು ಸ್ವಲ್ಪವಾದರೂ ಕುತೂಹಲವಾಗದಿರದು. ಸ್ಥಳೀಯ ಪುರೋಹಿತರನ್ನೋ ಸಾಧುಗಳನ್ನೋ ವಿಚಾರಿಸಿದರೆ "ಇದು ವೀಣಾಮಹಾರಾಜರ ಆಶ್ರಮ, ಅವರೇ ಇಲ್ಲಿ ರಾಘವೇಂದ್ರಗುರೂಜಿಯವರನ್ನು ಸ್ಥಾಪಿಸಿದ್ದು"ಎಂದು ಶುದ್ಧವಾದ ಹಿಂದಿಯಲ್ಲಿ ಹೇಳುತ್ತಾರೆ." ಈ ವೀಣಾಮಹಾರಾಜರು ಯಾರು ಎನ್ನುವುದನ್ನು ಯೋಚಿಸುತ್ತ ಹೋದರೆ ನಾವು ಹಿಮಾಲಯದಿಂದ ನಿಧಾನವಾಗಿ ಇಳಿದು ಹೃಷೀಕೇಶ, ಹರಿದ್ವಾರ, ಮಥುರಾ, ವಾರಾಣಸಿ ಹಾಗು ಹೈದರಾಬಾದಿನ ಮುಖಾಂತರ ಮಂತ್ರಾಲಯಕ್ಕೆ ಬಂದು ಅಲ್ಲಿಂದ ಬಯಲಸೀಮೆಯ ಗುಳೇದಗುಡ್ಡವನ್ನು ತಲುಪಬೇಕು.

ಬಾಗಿಲುಕೋಟೆ ಜಿಲ್ಲೆಯ ಗುಳೇದಗುಡ್ಡದಲ್ಲಿ ಪರ್ವತೀಕರ್ ಎನ್ನುವುದೊಂದು ಸುಪ್ರಸಿದ್ಧ ಶ್ರೀಮಂತ ಮನೆತನ. ಈ ಮನೆಯಲ್ಲಿ ಜನಿಸಿದ ಸಾಧಕರು ದತ್ತಾತ್ರೇಯ ರಾಮರಾವ್ ಪರ್ವತೀಕರ್. ಆದರೆ ಬಾಲ್ಯದಿಂದಲೂ ಶ್ರೀಮಂತಿಕೆಯ ಲೇಪನವನ್ನು ಮೈಗೂಡಿಸಿಕೊಳ್ಳದೆ ಅವಧೂತನ ಲಕ್ಷಣಗಳನ್ನೇ ಹೊಂದಿದವರು. ಇವರಿಗೆ ಶ್ರೀರಾಯರಲ್ಲಿ ಅದಮ್ಯವಾದ ಭಕ್ತಿ. ಸಂಗೀತದಲ್ಲಿ ಅಪಾರವಾದ ಸೆಳೆತದಿಂದ ಶ್ರೀಮಂತಿಕೆಯನ್ನು ತ್ಯಜಿಸಿ ವೀಣಾವಾದನದ ಸಾಧನೆಯಲ್ಲಿ ತೊಡಗಿದರು. ಪ್ರಪಂಚವು ಕಂಡ

ಮೇರುಸದೃಶ ವೀಣಾವಾದಕರಾದ ಶ್ರೀರಾಘವೇಂದ್ರಪ್ರಭುಗಳಲ್ಲಿ ಅಪಾರ ಭಕ್ತಿಯನ್ನು ಮಾಡಿ ಅವರ ಕೃಪೆಯಿಂದ ರುದ್ರವೀಣೆಯ ವಾದನದಲ್ಲಿ ಅಪಾರವಾದ ಪರಿಣತಿಯನ್ನು ಸಂಪಾದಿಸಿದರು. ಆದರೆ ಈ ಸಾಧನೆಯ ಇಲ್ಲಿಗೇ ನಿಲ್ಲದೆ ಮಂತ್ರಾಲಯದಿಂದ ಹಿಮಾಲಯದತ್ತ ತಮ್ಮ ಗುರಿಯನ್ನು ಹೊಂದಿಸಿ ಅಲ್ಲಿಗೆ ಹೊರಟರು. ಮಾರ್ಗ ಮಧ್ಯದಲ್ಲಿ ಹೈದರಾಬಾದಿನಲ್ಲೊಂದಿಷ್ಟು ಕಾಲ, ಕಾಶಿಯಲ್ಲೊಂದಿಷ್ಟು ವರ್ಷ, ಮಥುರೆಯಲ್ಲೊಂದಷ್ಟು ಕಾಲ, ಹರಿದ್ವಾರದ ಗಂಗೆಯ ತಟದಲ್ಲಿ ಕೆಲವರ್ಷ, ಹೃಷೀಕೇಶದಲ್ಲೊಂದಿಷ್ಟು ಸಮಯ ತಮ್ಮ ಆಶ್ರಮವನ್ನು ಕಟ್ಟಿಕೊಂಡು ಸಾಧನೆಯನ್ನು ಮಾಡಿದರು. ಹೃಷೀಕೇಶದಿಂದ ಹೊರಟು ಬಂದು ನಿಂತದ್ದು ಬದರಿಕಾಶ್ರಮದಲ್ಲಿ. ಹೀಗೆ ಮುಂದುವರೆದ ಹಾಗೆಲ್ಲ ಹಿಂದೆ ಬಿಟ್ಟು ಬಂದ ಆಶ್ರಮಗಳನ್ನೆಲ್ಲ ಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿಗಳವರ ಮಠಕ್ಕೆ ದಾನವಾಗಿ ಕೊಟ್ಟು ಅಂದಿನ ಮಠಾಧೀಶರಾದ ಶ್ರೀಸುಜಯೀಂದ್ರತೀರ್ಥರಿಗೆ ಸಂಬಂಧಿತ ಪತ್ರಗಳನ್ನು ಬರೆದುಕೊಟ್ಟರು. ಈ ಸ್ಥಳಗಳ ಇಂದಿನ ಮೌಲ್ಯ ಕಮ್ಮಿಯೆಂದರೂ 20–25 ಕೋಟಿಗಳಷ್ಟಾದೀತು. ಇಂತಹ ಸ್ಥಳಗಳನ್ನು ಸಂತೋಷದಿಂದಲೇ ಶ್ರೀರಾಯರಿಗೆ ದಾನಮಾಡಿದ್ದು ಈ ನಾದಯೋಗಿಯ ವಿರಕ್ತಿಯ ದ್ಯೋತಕ.

ಬದರಿಕಾಶ್ರಮದಲ್ಲಿ ಇವರು ನಾದಯೋಗದೊಂದಿಗೆ ಹಠಯೋಗಕ್ಕೂ ತೊಡಗಿದರು. ಹೀಗಾಗಿ ಇವರನ್ನು ಇಲ್ಲಿನ ಜನ ಇವರನ್ನು ವೀಣಾ ಮಹಾರಾಜರೆಂದೇ ಗೌರವದಿಂದ ಸಂಬೋಧಿಸತೊಡಗಿದರು. ಬದರಿಯಲ್ಲಿ ಇಂದಿನ ಅತ್ಯಂತ ಹಿರಿಯ ವೃದ್ಧರನ್ನು ವೀಣಾಮಹಾರಾಜರ ಯೋಗದ ಬಗ್ಗೆ ಕೇಳಿದರೆ "ಅವರು ಮಾಡುತ್ತಿದ್ದ ಗಾಯತ್ರೀ ಜಪದಷ್ಟು ನೀವು ಮಾತನ್ನು ಸಹ ಆಡಿರುವಿರೋ ಇಲ್ಲವೋ. ಅವರು ದೇಹವನ್ನು ದಂಡಿಸಿ ಮಾಡಿದ ತಪಸ್ಸಿನಷ್ಟು ನೀವು ಸ್ನಾನವನ್ನೂ ಮಾಡಿಲ್ಲವೇನೋ" ಎಂದು ಹೇಳುತ್ತಾರೆ. ಇದು ಉತ್ಪ್ರೇಕ್ಷೆಯಲ್ಲ. ಈ ಹಿರಿಯರು ವೀಣಾಮಹಾರಾಜರ ಯೋಗಾಭ್ಯಾಸವನ್ನು ಕಣ್ಣಾರೆ ಕಂಡವರು. ಮೈಹಿಂಡಿ ಹಾಕುವ ಚಳಿಗಾಳಿಯಲ್ಲಿ ಅಲಕನಂದೆಯ ದಂಡೆಯ ಮೇಲೆ ಕೇವಲ ಚಿಕ್ಕದೊಂದು ಪಂಚೆಯನ್ನು ಕಟ್ಟಿಕೊಂಡು 3ಗಂಟೆಗಳ ಕಾಲ ಶೀರ್ಷಾಸನ ಹಾಕಿ (ತಲೆ ಕೆಳಗೆ ಮಾಡಿ ಕಾಲು ಮೇಲೆ ಮಾಡುವ ಯೋಗಾಸನ) ಮಾಡುತ್ತಿದ್ದ ನಿರಂತರ ಗಾಯತ್ರೀಜಪದ ಬಗ್ಗೆ ಹೇಳುತ್ತಿದ್ದರೆ ಇವರ ಕಣ್ಣಿನಲ್ಲಿ ವೀಣಾ ಮಹಾರಾಜರ ಬಗ್ಗೆ ಅಪಾರ ಗೌರವ ಕಾಣಿಸುತ್ತದೆ.



**ಬದರಿಕಾಶ್ರಮದಲ್ಲಿರುವ ಶ್ರೀರಾಯರ ಚರವೃಂದಾವನ**

## ಶ್ರೀಗುರುರಾಜರು ಹಿಮಪರ್ವತಕ್ಕೆ ಬಂದರು!

ಮಹಾರಾಜರು ಹಿಂದೆ ಹೇಳಿದ ತಮ್ಮ ಎಲ್ಲ ಆಶ್ರಮಗಳಲ್ಲಿ ಶ್ರೀರಾಯರ ಚಿಕ್ಕದಾದ ಮೂರ್ತಿಯೊಂದಿಗೆ ತಮ್ಮ ಶಿಷ್ಯರೊಬ್ಬರನ್ನು ಇರಿಸಿ ಆಯಾ ಆಶ್ರಮಗಳೊಂದಿಗೆ ನಿರಂತರ ಸಂಪರ್ಕದಲ್ಲಿರುವಂತೆ ಏರ್ಪಾಡು ಮಾಡಿದರು. ಮುಂದೆ ಬದರಿಕಾಶ್ರಮದಲ್ಲಿ ಶ್ರೀರಾಯರ ವೃಂದಾವನವೊಂದನ್ನೇ ಪ್ರತಿಷ್ಠಾಪನೆ ಮಾಡುವ ಅಭಿಪ್ರಾಯ ಅವರಲ್ಲಿ ಉಂಟಾಯಿತು. ಹೀಗಾಗಿ ಪುನಃ ಮಂತ್ರಾಲಯದತ್ತ ಪಯಣಿಸಿ ಶ್ರೀಶ್ರೀಪಾದಂಗಳವರಿಂದ ಮೃತ್ತಿಕೆಯನ್ನು ಅನುಗ್ರಹಪೂರ್ವಕವಾಗಿ ಸಂಪಾದಿಸಿಕೊಂಡು ಬದರಿಕ್ಷೇತ್ರಕ್ಕೆ ತಂದು ಚರವೃಂದಾವನವನ್ನು ಸ್ಥಾಪಿಸಿದರು. ಮಾತ್ರವಲ್ಲ ಇಲ್ಲಿನ ಪೂಜೆಯು ನಿರಂತರವಾಗಿ ನಡೆದುಕೊಂಡು ಬರಲು ವ್ಯವಸ್ಥೆಯನ್ನು ಮಾಡಿದರು. ಅವರ ಆಶ್ರಮವೇ ಶ್ರೀರಾಯರ ಮಠವಾಗಿ ಪರಿವರ್ತಿತವಾಯಿತು. ಇದು ಶ್ರೀರಾಯರು ಭಕ್ತನೋರ್ವನನ್ನು ಹಿಂಬಾಲಿಸಿಕೊಂಡು ಬಂದು ಹಿಮಾಲಯದಲ್ಲಿ ನೆಲೆಸಿದ ಹಿನ್ನೆಲೆ. ಅಂದ ಹಾಗೆ ಈ ವೃಂದಾವನ ಸ್ಥಾಪನೆಯಾಗಿದ್ದು 60ರ ದಶಕದಲ್ಲಿ.

## ದೈವಾಂಶಸಂಭೂತರಿಗೆ ಇದು ಸಹಜ .

ಈ ಪರ್ವತದಲ್ಲಿ ಧ್ಯಾನದಲ್ಲಿ ನಿರಂತರವಾಗಿ ಮಗ್ನರಾಗುವ ಯೋಗ ಯಾವ ಸಾಧಾರಣ ನರನಿಗೂ ಸಾಧ್ಯವಿಲ್ಲ. ಪ್ರತಿಯೊಬ್ಬರೂ ನಿರ್ದಿಷ್ಟವಾದ ಅವಧಿಯನ್ನು ಮೊದಲೇ ಹಾಕಿಕೊಂಡು ಬಂದು ತಮ್ಮ ಸಾಧನೆಯ ಅವಧಿ ಮುಗಿಯಿತು ಎಂದ ಕೂಡಲೇ ಬದರಿಯನ್ನು ಬಿಟ್ಟು

ಹೊರಡುತ್ತಾರೆ. ಇಲ್ಲಿಯ ನಿವಾಸಿಗಳೇ ಆದ ಸಾಧುಗಳಲ್ಲಿಯೂ ಸಹ ಎಲ್ಲರೂ ವರ್ಷದ ಎಲ್ಲ ದಿನಗಳೂ ಇಲ್ಲಿಯೇ ಇರಲಾರರು. ಅಂದ ಹಾಗೆ ಬದರಿಯ ವ್ಯವಹಾರವೇನಿದ್ದರೂ ವರ್ಷದಲ್ಲಿ 6 ತಿಂಗಳೂ ಮಾತ್ರವೇ ಎಂಬುದು ನೆನಪಿರಲಿ. (ವಾಣಿಜ್ಯ ವ್ಯವಹಾರಗಳು ಹೆಸರಿಗೆ 6 ತಿಂಗಳಾದರೂ, ಚುರುಕಾದ ವ್ಯಾಪಾರ ಕೇವಲ ಮೂರು ತಿಂಗಳಿಗೇ ಮುಕ್ತಾಯ). ಬದರೀನಾಥನ ವಾರ್ಷಿಕ ಪೂಜಾವಧಿ ಮುಕ್ತಾಯವಾಗುವ ವೇಳೆಗೆ ಈ ಎಲ್ಲ ಸಾಧುಗಳೂ ಭಾರತದ ಇತರೆಡೆಗೆ ಯಾತ್ರೆಗೆ ಹೊರಡುತ್ತಾರೆ. ಹಿಮಪಾತದ ಸಂದರ್ಭದಲ್ಲಿಯೂ ಅಲ್ಲಿಯೇ ನೆಲೆಸುವ ಅಭಿಪ್ರಾಯದ ಸಾಧುಗಳು ಸಹ ಜೀವನ ಪರ್ಯಂತ ಅಲ್ಲಿಯೇ ಇರುವರೆಂದು ಹೇಳಲಾಗದು. ಎರಡು ವರ್ಷಕ್ಕೊಮ್ಮೆಯಾದರೂ ಬದರಿಯಿಂದ ಹೊರಗೆ ಬಂದೇ ಬರುವುದು ಸಾಮಾನ್ಯ. ಇನ್ನೊಂದು ವಿಷಯವೇನೆಂದರೆ ದೀಪಾವಳಿಯ ನಂತರದ 6 ತಿಂಗಳುಗಳು ಬದರೀನಾರಾಯಣನಿಗೆ ದೇವತೆಗಳೇ ಪೂಜೆ ಮಾಡುತ್ತಾರೆ ಎನ್ನುವ ನಂಬಿಕೆಯಿದೆ. ಶ್ರೀರಾಘವೇಂದ್ರತೀರ್ಥರು ಪ್ರಹ್ಲಾದನ ಅವತಾರಭೂತರು, ವಾಯುದೇವರ ಆವೇಶವುಳ್ಳವರು ಎನ್ನುವ ಅಂಶವನ್ನು ಹಾಗು ಈ ಮೇಲ್ಕಾಣಿಸಿದ ಕ್ಲಿಷ್ಟಕರ ಭೌಗೋಳಿಕ ಹಿನ್ನೆಲೆಯನ್ನು ಗಮನಿಸಿದಾಗ ಶ್ರೀರಾಘವೇಂದ್ರತೀರ್ಥರು ಬದರಿಕಾಶ್ರಮದಲ್ಲಿ ನೆಲೆಸಲು ಎಲ್ಲ ರೀತಿಯ ಯೋಗ್ಯತೆಯುಳ್ಳವರು ಎಂಬ ಅಂಶ ಸ್ಪಷ್ಟವಾಗುತ್ತದೆ. ಇತರ ಯಾರಿಗೂ ಈ ಪರ್ವತದಲ್ಲಿ ನಿರಂತರ ವಾಸ್ತವ್ಯಕ್ಕೆ ಸ್ಥಳ ದೊರೆಯದೆ ಶ್ರೀರಾಘವೇಂದ್ರರಿಗೆ ಮಾತ್ರ ದೊರೆತಿದ್ದು ಸಾಮಾನ್ಯರಾದ ನಮಗೆ ಆಶ್ಚರ್ಯಭರಿತ ಸಂತಸಕ್ಕೆ ಕಾರಣವಾಗಬಹುದು. ಆದರೆ ದೈವಾಂಶಸಂಭೂತರಾದ ಗುರುರಾಯರಿಗೆ ಇದು ಅತ್ಯಂತ ಸಹಜ.

## ಪ್ರಹ್ಲಾದಧಾರೆಯ ಹಿನ್ನೆಲೆಯಲ್ಲಿ....

ನಮ್ಮ ಸಂತಸಕ್ಕೆ ಮತ್ತಷ್ಟು ಇಂಬುಕೊಡಲು ಇನ್ನೊಂದು ಸಂಗತಿ ಇದೆ. ನಾರಾಯಣ ಪರ್ವತದಲ್ಲಿ ಈ ರಾಯರ ಮಠವು ನೆಲೆನಿಂತ ಜಾಗಕ್ಕೆ ಸರಿಯಾದ ಹಿಂಭಾಗದಲ್ಲಿರುವ ಪರ್ವತಭಾಗದಲ್ಲಿ ಮನೋಹರವಾದ ಜಲಪಾತವೊಂದು ಪರ್ವತದ ತುದಿಯಿಂದ ಧುಮ್ಮಿಕ್ಕುತ್ತದೆ. ಈ ಜಲಪಾತದ ಹೆಸರೇನು ಗೊತ್ತೇ? "ಪ್ರಹ್ಲಾದಧಾರಾ"! ಇದು ಯಾರೋ ಇತ್ತೀಚೆಗೆ ಮಾಡಿದ ನಾಮಕರಣವಲ್ಲ. ಈ ಧಾರೆಗೆ ಶತಮಾನಗಳಿಂದಲೂ ಪ್ರಹ್ಲಾದಧಾರೆಯೆಂದೇ ಹೆಸರು. ಪ್ರಹ್ಲಾದಧಾರೆಯ ಬಳಿ ಪ್ರಹ್ಲಾದನಲ್ಲದೆ ನಿರಂತರವಾಗಿ ಜಪಮಾಡಲು ಬೇರಾರಿಗೆ ಸಾಧ್ಯ? ಈ ದೃಷ್ಟಿಯಿಂದಲೂ ಶ್ರೀರಾಯರು ಇಲ್ಲಿ ಬಂದು ನೆಲೆಸಿರುವುದು ಒಂದು ದೈವೀಪ್ರಯತ್ನ ಎನ್ನಲಡ್ಡಿಯಿಲ್ಲ.

## ಸಾಧು ಸಂಗವಾಗಲಿ.

ವೀಣಾಮಹಾರಾಜರ ಇನ್ನೊಂದು ವಿಶೇಶವೆಂದರೆ, ತಮ್ಮ ಸಾಂಗತ್ಯಕ್ಕೆ ಬಂದ ಎಲ್ಲರಲ್ಲಿಯೂ ಅವರು ಶ್ರೀರಾಘವೇಂದ್ರ ಗುರುಗಳಬಗ್ಗೆ ಭಕ್ತಿಯನ್ನು ಬಿತ್ತಿದ್ದಾರೆ. ಮೇಲ್ಕಾಣಿಸಿದ ಎಲ್ಲ ಸ್ಥಳಗಳಲ್ಲಿಯೂ ಇಂದಿಗೂ ಸಹ ಶ್ರೀರಾಘವೇಂದ್ರತೀರ್ಥರ ಶ್ಲೋಕವನ್ನು ಹೇಳಿಯೇ ಪ್ರವಚನ/ಸಂಗೀತ ಸಭೆ/ಸತ್ಸಂಗವನ್ನು ಪ್ರಾರಂಭಿಸುವ ನೂರಾರು ಮಂದಿ ವಿದ್ವಾಂಸರಿದ್ದಾರೆ. ಬದರಿಕಾಶ್ರಮದಲ್ಲಿ ನಿರಂತರವಾಗಿ ನಡೆದು ಬರುತ್ತಿರುವ ಭಾಗವತ ಪ್ರವಚನ ಸಭೆಯೊಂದರಲ್ಲಿ ಪ್ರತಿನಿತ್ಯವೂ "ಪೂಜ್ಯಾಯ ರಾಘವೇಂದ್ರಾಯ... ವೇ ಮಂಗಳ ಶ್ಲೋಕ. ಮಠದ ಮುಂದೆ ಹಾಯ್ದುಹೋಗುವ ನೇಪಾಳೀ ಕೆಲಸದಾಳುಗಳು, ನಾಗಾರಾಧಕ ಸಾಧುಗಳೂ, ಸ್ಥಳೀಯ ಪಂಡಾಗಳೂ ರಾಯರ ಶ್ಲೋಕವನ್ನು ಹೇಳಿ ರಾಯರಿಗೆ ತಲೆಬಾಗಿಯೇ ಮುಂದೆ ಹೋಗುತ್ತಿದ್ದುದನ್ನು ನಾನು ಪ್ರತ್ಯಕ್ಷ ನೋಡಿ ಹೆಮ್ಮೆ ಪಟ್ಟಿದ್ದೇನೆ. ಈ ರೀತಿಯಾದ ಸಿದ್ಧಾಂತಪ್ರಚಾರದಲ್ಲಿಯೂ ವೀಣಾ ಮಹಾರಾಜರು ಎತ್ತಿದ ಕೈ.



**ತಾವೇ ರೂಪಿಸಿದ ವೀಣೆಯೊಂದಿಗೆ ವೀಣಾಮಹಾರಾಜರು**

## ವಿಚಿತ್ರವೀಣೆಯೊಂದರ ಆವಿಷ್ಕಾರ

ನಿರಂತರವಾಗಿ ಪ್ರಯೋಗಶೀಲರೇ ಆಗಿರುತ್ತಿದ್ದ ಈ ನಾದಯೋಗಿಗಳು ರುದ್ರವೀಣೆಯ ವಿನ್ಯಾಸದಲ್ಲಿ ಅನೇಕ ವಿಧವಾದ ಮಾರ್ಪಾಡು ಮಾಡಿ ತಮ್ಮದೇ ಆದ ದತ್ತಾತ್ರೇಯವೀಣೆಯ (ಇದಕ್ಕೆ ವಿಚಿತ್ರ ವೀಣೆಯೆಂದು ಸಹ ಅವರು ಕರೆದಿದ್ದಾರೆ) ಆವಿಷ್ಕಾರವನ್ನು ಮಾಡಿದರು. ಇಂಟರ್‌ನೆಟ್ಟಿನಲ್ಲಿ ಸ್ವಾಮಿ ಪರ್ವತೀಕರ್ ಎಂದು ಹುಡುಕಾಡಿದರೆ ಇವರ ಅತ್ಯಂತ ಶಾಸ್ತ್ರಬದ್ಧವಾದ ಕೃತಿಗಳಲ್ಲಿ ಕೆಲವು

ಕೇಳಲು ಸಿಗುತ್ತವೆ.

## ವೈಶ್ವಾನರ ಯಜ್ಞ

ಶ್ರೀಮತದ ಹಿಂದಿನ ಪೀಠಾಧಿಪತಿಗಳಾಗಿದ್ದ ಶ್ರೀಸುಶಮೀಂದ್ರತೀರ್ಥರು ಎರಡನೆ ಬಾರಿ ಬದರೀಯಾತ್ರೆಯನ್ನು ಕೈಗೊಂಡಾಗ ಪರ್ವತ ಹಿನ್ನೆಲೆಯಿಂದಾಗಿ ಚಿಕ್ಕದಾಗಿರುವ ಈ ಮಠವನ್ನು ನವೀಕರಿಸುವ ಯೋಜನೆಗೆ ಶಂಕುಸ್ಥಾಪನೆ ಮಾಡಿದ್ದಾರೆ. ಮಾತ್ರವಲ್ಲ, ಇಲ್ಲಿಗೆ ಬರುವ ಎಲ್ಲ ಯಾತ್ರಿಕರಿಗೆ ಊಟವು ಒಂದು ಅನನುಕೂಲವಾಗಿರುವುದನ್ನು ಪರಿಗಣಿಸಿ ಮಧ್ಯಾಹ್ನ ಹಾಗು ರಾತ್ರಿಯ ವೇಳೆ ಬಿಸಿ ಭೋಜನ ಪ್ರಸಾದವನ್ನು ಒದಗಿಸುವ ನಿಟ್ಟಿನಲ್ಲಿ "ವೈಶ್ವಾನರ ಯಜ್ಞ" ಎನ್ನುವ ಯೋಜನೆಗೆ ಚಾಲನೆ ನೀಡಿದ್ದಾರೆ. ಉತ್ತರಭಾರತದಲ್ಲಿ ದಕ್ಷಿಣದ ರೀತಿಯ ಅಕ್ಕಿ ಹಾಗು ಬೇಳೆ ದೊರೆಯದ ಕಾರಣ ಕರ್ನಾಟಕದ ಗಂಗಾವತಿ ಹಾಗು ಗುಲ್ಬರ್ಗದಿಂದ ಹೇರಳ ಪ್ರಮಾಣದಲ್ಲಿ ಅಕ್ಕಿ ಹಾಗು ಬೇಳೆಯನ್ನು ಬದರೀನಾಥಕ್ಕೆ ಕಳುಹಿಸಿ ಅನ್ನದಾನದ ಯೋಜನೆಯು ನಿತ್ಯ ನಡೆಯುವಂತೆ ಏರ್ಪಾಡು ಮಾಡಿದ್ದಾರೆ. ಅವರ ಶಿಷ್ಯರೂ ಪ್ರಸ್ತುತ ಪೀಠಾಧಿಪತಿಗಳೂ ಆದ ಶ್ರೀಸುಯತೀಂದ್ರತೀರ್ಥರು ತಮ್ಮ ಗುರುಗಳ ಯೋಜನೆಯನ್ನು ಸಮರ್ಥವಾಗಿ ಮುಂದುವರೆಸುತ್ತಿದ್ದಾರೆ. ಇರುವ ಮಠವನ್ನು ದೊಡ್ಡದಾಗಿಸುವುದು ಪ್ರಾಕೃತಿಕವಾಗಿ ಅಸಾಧುವಾದ ಕಾರಣ ನರ ಪರ್ವತದ ಇನ್ನೊಂದೆಡೆಯಲ್ಲಿ ಶ್ರೀಮಠದ ಇನ್ನೊಂದು ಧರ್ಮಶಾಲೆಯನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿದ್ದಾರೆ.

## ಈ ಮಠ ಎಲ್ಲಿದೆ?

ಈ ವೃಂದಾವನ ಸನ್ನಿಧಾನವು ಬದರೀನಾರಾಯಣನ ಮಂದಿರದಿಂದ ಮಾನಾಗ್ರಾಮಕ್ಕೆ ಹೋಗುವ ಹಳೆಯ ರಸ್ತೆಯಲ್ಲಿದೆ. ಬದರೀನಾಥದ ಸುಪ್ರಸಿದ್ಧ ಬ್ರಹ್ಮಕಪಾಲವು ಶ್ರೀಮಠದ ಕೆಳಗಿನ ಹಂತದಲ್ಲಿದೆ.

## ತೀರ್ಥಪ್ರಸಾದಕ್ಕೆ ಅನುಕೂಲವಿದೆಯೆ?

ಶ್ರೀಮಠವು ಸ್ವಲ್ಪ ಚಿಕ್ಕದಾಗಿದ್ದರೂ ದಿನಕ್ಕೆ ಸುಮಾರು 200 ಜನಕ್ಕೆ ತೀರ್ಥಪ್ರಸಾದಕ್ಕೆ ಅನುಕೂಲವನ್ನು ಕಲ್ಪಿಸುವಷ್ಟಿದೆ. ಮುಂದಾಗಿಯೇ ಹೇಳಿದ್ದಲ್ಲಿ ಅರ್ಧ ಗಂಟೆಯಲ್ಲಿಯೇ ಬಿಸಿ ಬಿಸಿಯಾದ ಭೋಜನ ಲಭ್ಯ. ಅಡಿಗೆ ಮಾಡಿಟ್ಟ ಕೆಲವೇ ನಿಮಿಷಗಳಲ್ಲಿ ತಣ್ಣಗಾಗಿ ಮೈನಸ್ ತಾಪಮಾನಕ್ಕೆ ತಿರುಗುವುದು. ಬಿಸಿಯಾದ ಊಟವೇ ದೊರಕಲಿ ಎಂದು ಈ ಉದ್ದೇಶ.

## ಸಂಪರ್ಕ ವಿಳಾಸ:

ಬದರೀನಾಥದ ಈ ಶಾಖಾಮಠದ ಆಡಳಿತವನ್ನು ದೆಹಲಿಯಲ್ಲಿರುವ ಶ್ರೀಮಠದ ಶಾಖೆಯ ವ್ಯವಸ್ಥಾಪಕರೇ ನೋಡಿಕೊಳ್ಳುತ್ತಾರೆ. ಮಾತ್ರವಲ್ಲ ಬದರಿಗೆ ಹೋಗುವ ಮೊದಲು ಮಾರ್ಗಮಧ್ಯ ದೆಹಲಿಯಲ್ಲಿ ವಾಸ್ತವ್ಯವನ್ನು ಮಾಡಲು ಸಹ ದೆಹಲಿ ಮಠದಲ್ಲಿ ಅನುಕೂಲವಿದೆ. ದೆಹಲಿ ಮಠದ ವಿಳಾಸ ಈ ಕೆಳಕಂಡಂತೆ ಇದೆ.

ಮಂತ್ರಾಲಯ ಶ್ರೀರಾಘವೇಂದ್ರಸ್ವಾಮಿ ಮಠ
ರಾವ್ ತುಲಾರಾಮ್ ಮಾರ್ಗ್, ಮೋತಿಬಾಗ್ ಫ್ಲೈ ಓವರ್ ಹತ್ತಿರ
ಸೆಕ್ಟರ್ 12, ಆರ್.ಕೆ.ಪುರಂ, ನವದೆಹಲಿ 22
ದೂ : 011–26172892

- ಬದರಿಯಲ್ಲಿ ಸಂಪರ್ಕಿಸುವ ಸಂಖ್ಯೆ : 9968385037
- ಗೂಗಲ್ ಮ್ಯಾಪಿನಲ್ಲಿ ನೋಡಬೇಕೆಂದರೆ ಬದರೀಮಠದ ಅಕ್ಷಾಂಶ ರೇಖಾಂಶಗಳು 30°44'44"N 79°29'31"E

## ಕೊನೆಯದಾಗಿ...

ಈ ಲೇಖನದ ಮೂಲ ಉದ್ದೇಶ ಬದರಿಗೆ ಶ್ರೀರಾಯರು ಬಂದ ಹಿನ್ನೆಲೆಯನ್ನು ವಿವರಿಸುವುದು. ಇದಕ್ಕಾಗಿ ತಪಸ್ಸು ಮಾಡಿ ಕಾರಣರಾದ ಶ್ರೀಪರ್ವತೀಕರ್ ಮಹಾರಾಜರ ಬಗ್ಗೆ ಸ್ವಲ್ಪವಾದರೂ ಹೇಳದೆ ಹೋದರೆ ಓದುಗರಿಗೆ ಇಲ್ಲಿನ ಮಠದ ವೈಶಿಷ್ಟ್ಯವು

ಸಂಪೂರ್ಣವಾಗಿ ಮನೋಗತವಾಗದೆ ಹೋಗಬಹುದು. ಮಾತ್ರವಲ್ಲ ಅವರನ್ನು ಬಿಟ್ಟು ಈ ಲೇಖನವು ಶೂನ್ಯ, ಅದು ರಾಯರಿಗೂ ಪ್ರೀತಿಯಾಗದು. ರಾಯರ ಕೃಪೆ ಹಾಗು ವೀಣಾಮಹಾರಾಜರ ಆಶೀರ್ವಾದ ನಮಗಾಗಲಿ.

ಪರ್ವತೀಕರರ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಅವರು ಸ್ಥಾಪಿಸಿದ ಶ್ರೀ ರಾಘವೇಂದ್ರ ಮಿಷನ್ನಿನ ಸದ್ಯದ ಮುಖ್ಯಸ್ಥರಾದ

1. ಶ್ರೀ ಬಿ.ಕೆ. ಗುರುರಾಜ (080)-25253204 / 9844172028
2. ಅಥವಾ ರಾಜೇಂದ್ರ ಪರ್ವತೀಕರ್, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ ಇವರನ್ನು ಸಂಪರ್ಕಿಸಬಹುದು.